ಶ್ರೀ ಎಚ್.ಕೆ.ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):

ಅ) ಸುಪ್ರೀಮ ಕೋರ್ಟ್‌ನ ಸಂವಿಧಾನ ಪೀಠವು ಏಪ್ರಿಲ್ 200 ದಲ್ಲಿ ಕೊಟ್ಟ ತೀರ್ಪಿನಂತೆ ಸ್ಕೀಂ 'ಬಿ' ಅನ್ನು ಅನ್ವಯ ಕರ್ನಾಟಕಕ್ಕೆ 183 ಟಿ ಎಂಸಿ ಹೆಚ್ಚುವರಿ ನೀರು ದೊರೆಯಬೇಕಾಗಿದೆ.

ಆ) ಬಿ ಸ್ಕೀಂ ಇನ್ನೂ ಅನುಷ್ಠಾನಕ್ಕೆ ಬಾರದೇ ಇರುವುದರಿಂದ, ಯಾವ ಯೋಜನೆಗಳನ್ನೂ ಘೋಷಿಸಿರುವುದಿಲ್ಲ. 'ಬಿ' ಸ್ಕೀಂ ಅಡಿಯಲ್ಲಿ ಯೋಜನೆಗಳನ್ನು ಗುರುತಿಸುವ ಸಲುವಾಗಿ ಒಂದು ಸಮಿತಿಯನ್ನು ರಚಿಸಲಾಗಿದೆ. ವರದಿ ನಿರೀಕ್ಷಿಸಲಾಗಿದೆ ಉತ್ತರ ಕರ್ನಾಟಕದ ಕೊಪ್ಪಳ ಜಿಲ್ಲೆಯ ಕೊಪ್ಪಳ ಮತ್ತು ಯಲಬುರ್ಗಾ ತಾಲ್ಲೂಕುಗಳಲ್ಲಿ ಯಾವುದೇ ಸರ್ವೆ ಕೆಲಸ ತೆಗೆದುಕೊಂಡಿರುವುದಿಲ್ಲ.

ಸವದತ್ತ ತಾಲ್ಲೂಕಿನಲ್ಲಿ ಕೆರೆಗಳ ಹೂಳೆತ್ತುವುದು

1232 (1719) ಶ್ರೀ ಮಹಾಂತೇಶ ಎಸ್.ಕೌಜಲಗಿ (ಬೈಲಹೊಂಗಲ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂವ್ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಸಣ್ಣ ನೀರಾವರಿ ಇಲಾಖೆಗೆ ಸೇರಿದ ಕೆರೆಗಳಿಂದ ಸಿದ್ದಸಮುದ್ರ ಬುದರಕಟ್ಟಿ ಕೊಡ್ಡವಾಡ ಬೈಲವಾಡ ಹಾಗೂ ಸವದತ್ತಿ ತಾಲ್ಲೂಕಿನ ಹಿರೇಕೊಪ್ಪ ಮಳಗಲಿ ಹಿರೇಬುದನೂರ, ಮರಕುಮಚಿ ಇಂಚಲ ಗ್ರಾಮದ ಕೆರೆಗಳ ಹೂಳೆತ್ತಲು ವಿಶ್ವಬ್ಯಾಂಕ್ ಅಥವಾ ಇಲಾಖೆಯ ಯಾವುದಾದರೊಂದು ಯೋಜನೆಯಲ್ಲಿ ಕ್ರಮ ಕೈಗೊಳ್ಳಲಾಗುವುದೇ;

ಆ) ಈ ಪ್ರತಿಯೊಂದು ಕೆರೆಯ ಹೂಳೆತ್ತಲು ಎಷ್ಟು ಖರ್ಚು ತಗಲಬಹುದು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) ಬೆಳಗಾಂವ್ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಸಿದ್ದ ಸಮುದ್ರ ಕೆರೆ ಮತ್ತು ಸವದತ್ತಿ ತಾಲ್ಲೂಕಿನ ಹಿರೇಕೊಪ್ಪ, ಮಳಗಟ್ಟಿ, ಹಿರೇಬೂದನೂರ, ಮರಕುಂಚಿ ಮತ್ತು ಇಂಚಲ ಕೆರೆಗಳು ಮಾತ್ರ ಸಣ್ಣ ನೀರಾವರಿ ವ್ಯಾಪ್ತಿಯಲ್ಲಿರುತ್ತವೆ. ಬೈಲಹೊಂಗಲ ತಾಲ್ಲೂಕಿನ ಬುಡರಕಟ್ಟಿ ದೊಡ್ಡವಾದ ಬೈಲವಾಡ ಕೆರೆಗಳು ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಒಳಪಡುತ್ತವೆ. ರೈತರ ಸಹಭಾಗಿತ್ವದಲ್ಲಿ ಹೂಳೆತ್ತುವ ಕಾರ್ಯಕ್ರಮದಡಿಯಲ್ಲಿ ಮುಂದಿನ ವರ್ಷಗಳ ಆಯವ್ಯಯದಲ್ಲಿ ಅನುದಾನ ಲಭ್ಯತೆ ಆಧರಿಸಿ ಆದ್ಯತೆಯ ಮೇಲೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಪ್ರಯತ್ನಿಸಲಾಗುವುದು. ಅಲ್ಲದೆ ಜಲಸಂವರ್ಧನೆ ಯೋಜನೆಯಡಿಯಲ್ಲಿ ವಿಶ್ವಬ್ಯಾಂಕ್‌ನ ನೀತಿ ನಿಯಮಾವಳಿಗಳ ವ್ಯಾಪ್ತಿಯಲ್ಲಿ ಬರುವುದಾದಲ್ಲಿ ಹೂಳೆತ್ತುವುದೂ ಸೇರಿದಂತೆ ಈ ಕೆರೆಗಳ ಸಮಗ್ರ ಅಭಿವೃದ್ಧಿ ಕೂಡ ಕೈಗೊಳ್ಳಲಾಗುವುದು.

ಆ) ಈ ಕೆರೆಗಳ ತಗಲಬಹುದಾದ ಅಂದಾಜು ವೆಚ್ಚವು ಕೆಳಗಿನಂತಿದೆ.

1)	ಸಿದ್ದಸಮುದ್ರ ಕೆರೆ ಹೂಳೆತ್ತುವುದು	16.00 ಲಕ್ಷಗಳು
2)	ಹಿರೇಕೊಪ್ಪ ಕೆರೆ ಸವದತ್ತಿ ತಾಲ್ಲೂಕು	8.00 ಲಕ್ಷಗಳು
3)	ಮಳಗಲಿ ಕೆರೆ ಸವದತ್ತಿ ತಾಲ್ಲೂಕು	10.00 ಲಕ್ಷಗಳು

4) ಹಿರೇಬುದನೂರು ಕೆರೆ ಸವದತ್ತಿ ತಾಲ್ಲೂಕು 9.00 ಲಕ್ಷಗಳು

5) ಮಂಕುಂಬಿ ಕೆರೆ ಹೂಳೆತ್ತುವುದು 8.00 ಲಕ್ಷಗಳು

6) ಇಂಚಲ ಕೆರೆ ಹೂಳೆತ್ತುವುದು 8.00 ಲಕ್ಷಗಳು

ಸವದತ್ತಿ ತಾಲ್ಲೂಕಿನ ಹಿಟ್ಟಣಗಿ ಗ್ರಾಮದಲ್ಲಿ ಶಾಲಾ ಕಟ್ಟಡ ಹಾಗೂ ಇನ್ನುಳಿದ ಕಟ್ಟಡಗಳನ್ನು ಕಟ್ಟಿಸುವುದು

1233 (1722) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗ ದಯವಿಟ್ಟು ಉತ್ತರಿಸುವರೆ?

ಅ) ಮಲಪ್ರಭಾ ಯೋಜನೆಯಡಿಯಲ್ಲಿ ಮುಳುಗಡೆಯಾದ ಪ್ರದೇಶದ ಜನರ ಅನುಕೂಲತೆಗಾಗಿ ಕಾರ್ಯಕಾರಿ ಅಭಿಯಂತರರು ನೀರಾವರಿ ನಿಗಮ ನವಿಲು ತೀರ್ಥ ಇವರು ಸವದತ್ತಿ ತಾಲ್ಲೂಕಿನ ಹಿಟ್ಟಣಗಿ ಗ್ರಾಮದಲ್ಲಿ 5 ಶಾಲಾ ಕೋಣೆ ಕಟ್ಟಲು ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿಯನ್ನು ಇಲಾಖೆಯವರು ಎಂದು ನೀಡಿದರು;

ಆ) ಸವದತ್ತಿ ತಾಲ್ಲೂಕಿನ ಹಿಟ್ಟಣಗಿ ಗ್ರಾಮದಲ್ಲಿ ಶಾಲಾ ಕೋಣೆ ಕಟ್ಟಲು ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ನೀಡಿದ್ದು ಕೂಡಲೇ ಕೆಲಸ ಮುಗಿಸಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ

ಶ್ರೀ ಎಚ್.ಕೆ. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

ಅ) ಹಿಟ್ಟಣಗಿ ಪುನರ್ವಸತಿ ಗ್ರಾಮದಲ್ಲಿ 4 ಕೋಣೆಗಳ ಶಾಲಾ ಕಟ್ಟಡ ಕಟ್ಟಲು ಸರ್ಕಾರದ ದಿನಾಂಕ 29-8-96ರ ಪತ್ರದಲ್ಲಿ ಅನುಮೋದನೆ ನೀಡಲಾಗಿದೆ. ಹಾಗೂ ಮುಖ್ಯ ಇಂಜನಿಯರ್, ನೀರಾವರಿ (ಉತ್ತರ), ಬೆಳಗಾವಿ ರವರ ಫೆಬ್ರವರಿ 1997 ರಲ್ಲಿ ರೂ. 10.30 ಲಕ್ಷಗಳ ಅಂದಾಜಿಗೆ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಆ) ಸದರಿ ಕೆಲಸವನ್ನು ಕೈಗೊಳ್ಳುವ ಉದ್ದೇಶದಿಂದಲೇ ಟೆಂಡರ್ ಕರೆಯಲಾಗಿತ್ತು. ಈ ನಡುವೆ ಸರ್ಕಾರದ ಆದೇಶದನ್ವಯ ಸದರಿ ಕಾಮಗಾರಿಯನ್ನು ನಾನ್ ಕ್ರಿಟಿಕಲ್ ಎಂದು ಪರಿಗಣಿಸಿ ಈ ಕೆಲಸವನ್ನು ಕೈ ಬಿಡಲಾಯಿತು. ಸದರಿ ಕಾಮಗಾರಿಯನ್ನು 2001-02 ನೇ ಸಾಲಿನ ಕಾರ್ಯಕ್ರಮದ ಪಟ್ಟಿಯಲ್ಲಿ ಅಳವಡಿಸಿ ಅನುಮೋದನೆ ನೀಡಿದ ನಂತರ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದು.

ಬೆಳಗಾಂವ ಜಿಲ್ಲೆ ಸವದತ್ತಿ ತಾಲ್ಲೂಕಿನ ಏಣಿಗಿ ಆಗಮೆಂಟೇಶನ್ ಆಫ್ ಲಿಫ್ಟ್ ಇರಿಗೇಶನ್ ಪ್ರಾರಂಭಿಸುವುದು.

1234 (1718) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂವ ಜಿಲ್ಲೆ ಸವದತ್ತಿ ತಾಲ್ಲೂಕಿನ ಏಣಿಗಿ ಗ್ರಮಾದ ಜಮೀನುಗಳು ಮಲಪ್ರಭಾ ಯೋಜನೆಯಡಿಯಲ್ಲಿ ಮುಳುಗಡೆಯಾದ ಸಂಗತಿ ನಿಜವೇ;